
# ಹಸಿಹಾಲು, ಮಾಂಸಗಳಿಂದಲೂ ಕಾಯಿಲೆ

**ಹಸಿಹಾಲು, ಹಸಿಮೊಟ್ಟೆ, ಅರೆಬೆಂದ ಮಾಂಸ ಮುಂತಾದವುಗಳನ್ನು ರುಚಿಗಾಗಿ ಸೇವಿಸಿದರೆ ಕಾಯಿಲೆ ಬರುವ ಅಪಾಯ ಇದೆ.**

■ ಡಾ. ಯುವರಾಜ ಹೆಗಡೆ

ಹಸಿಯಾದ ಹಾಲು, ಮೊಟ್ಟೆ ಮತ್ತು ಅರೆಬೆಂದ ಮಾಂಸಾಹಾರವನ್ನು ರುಚಿಗಾಗಿ ಸೇವಿಸುವುದು ಹಲವಾರು ಕಡೆಗಳಲ್ಲಿ ರೂಢಿಯಲ್ಲಿದೆ. ಗ್ರಾಮೀಣ ಭಾಗಗಳಲ್ಲಿ ನೊರೆ ಹಾಲನ್ನು ಮತ್ತು ಹಸಿ ಮೊಟ್ಟೆಯನ್ನು ಕುಡಿಯುವುದು ಶಕ್ತಿವರ್ಧಕವೆಂದು ತಿಳಿದು ಸೇವಿಸುವುದು ಮತ್ತು ಪಟ್ಟಣ ಪ್ರದೇಶಗಳಲ್ಲಿ ಮುಖ್ಯವಾಗಿ ಯುವ ಸಮೂಹವು ರುಚಿಗಾಗಿ ಅರೆಬೆಂದ ಮಾಂಸಾಹಾರ ಸೇವಿಸುವ ಪದ್ಧತಿ ರೂಡಿಸಿಕೊಂಡಿದೆ. ಆದರೆ ವೈಜ್ಞಾನಿಕವಾಗಿ ಅವಲೋಕಿಸಿದಾಗ ಕಾಯಿಸದೆ ಕುಡಿದ ಹಾಲು, ಅರೆಬೆಂದ ಮೊಟ್ಟೆ ಮತ್ತು ಮಾಂಸ ಸೇವನೆಯಿಂದ ಹಲವಾರು ರೋಗಗಳನ್ನು ಆಹ್ವಾನಿಸಿದಂತಾಗುತ್ತದೆ.




## ಹಸಿ ಹಾಲಿನಿಂದಲೂ ಕಾಯಿಲೆ

ಬ್ರುಸೆಲ್ಲೋಸಿಸ್ (ಕಂದು ರೋಗ)

ಬ್ರುಸೆಲ್ಲೋಸಿಸ್ ಒಂದು ಬ್ಯಾಕ್ಟೀರಿಯಾದಿಂದ ಬರುವ ಕಾಯಿಲೆಯಾಗಿದ್ದು, ರೋಗಗ್ರಸ್ಥ ಜಾನುವಾರುಗಳ ಹಾಲಿನಿಂದ ರೋಗಾಣುಗಳು ಹೊರಸೂಸಲ್ಪಡುತ್ತವೆ. ಪ್ರಾಣಿಗಳಲ್ಲಿ ಈ ಕಾಯಿಲೆಗೆ ತುತ್ತಾದಾಗ ಗರ್ಭಪಾತ, ಕೀಲುಗಳಲ್ಲಿ ಊತ, ಗಂಡುಗಳಲ್ಲಿ ಸಂತಾನಹೀನತೆ ಕಂಡು ಬರುತ್ತದೆ. ಸೋಂಕಿಗೆ ಒಳಗಾದ ರಾಸುಗಳ ಹಸಿಯಾದ ಹಾಲನ್ನು ಕುಡಿದಾಗ ಮನುಷ್ಯರಲ್ಲಿಯೂ ಕೂಡ ಸೋಂಕು ಕಂಡು ಬಂದು ಜ್ವರ, ಗರ್ಭಪಾತ, ಕೀಲುಗಳಲ್ಲಿ ಊತ, ಹೃದಯ ಸಂಬಂಧಿ ಸಮಸ್ಯೆಗಳು, ಗಂಡಸರ ವೃಷಣಗಳಲ್ಲಿ ಸಮಸ್ಯೆ ಕಾಣಿಸಿಕೊಳ್ಳುತ್ತವೆ. ಹಾಲನ್ನು ಸರಿಯಾಗಿ ಕಾಯಿಸಿ ಕುಡಿಯುವುದರಿಂದ ಸೋಂಕು ಹಾಲಿನ ಮುಖಾಂತರ ಹರಡದಂತೆ ತಡೆಗಟ್ಟಬಹುದು. ಜಾನುವಾರುಗಳಲ್ಲಿ 4 ರಿಂದ 8 ತಿಂಗಳ ಹೆಣ್ಣು ಕರುಗಳಿಗೆ ಮುಂಜಾಗ್ರತಾ ಲಸಿಕೆ ಲಭ್ಯವಿದ್ದು, ಅದನ್ನು ನೀಡಿದಲ್ಲಿ ಪ್ರೌಢಾವಸ್ಥೆಯ ಸಮಯದಲ್ಲಿ ಜಾನುವಾರುಗಳಿಗೆ ಸೋಂಕು ಹರಡದಂತೆ ತಡೆಗಟ್ಟಬಹುದು.

## ಕ್ಷಯ

ಕ್ಷಯ ರೋಗವು Tuberculosis ಎಂಬ ಬ್ಯಾಕ್ಟೀರಿಯಾದಿಂದ ಬರುವ ಪ್ರಾಣಿಜನ್ಯ ಕಾಯಿಲೆಯಾಗಿದ್ದು, ವಿಶ್ವ ಆರೋಗ್ಯ ಸಂಸ್ಥೆಯ ಪ್ರಕಾರ ಭಾರತದಲ್ಲಿ ಪ್ರತಿವರ್ಷ 2.6 ದಶಲಕ್ಷ ಜನರಲ್ಲಿ ಸೋಂಕು ಕಾಣಿಸಿಕೊಳ್ಳುತ್ತಿದೆ. ಪ್ರತಿವರ್ಷ ವಿಶ್ವದಲ್ಲಿ 10 ದಶಲಕ್ಷದಷ್ಟು ಮಂದಿ ಸೋಂಕಿಗೆ ಒಳಪಡುತ್ತಿದ್ದು, ಅದರಲ್ಲಿ ನಾಲ್ಕನೆ ಒಂದು ಭಾಗದಷ್ಟು ಜನ ಸೋಂಕಿತರು ಭಾರತದಲ್ಲಿಯೇ ಇದ್ದಾರೆಂಬುದು ಸೋಂಕಿನ ಗಂಭೀರತೆಯನ್ನು ತಿಳಿಸುತ್ತದೆ.

ಸೋಂಕಿಗೆ ಒಳಗಾದ ಜಾನುವಾರಿನ ಹಾಲು ಮತ್ತು ಕಫದ ಮುಖಾಂತರ ರೋಗಾಣುಗಳು ಮಾನವರಿಗೆ ಹರಡುತ್ತವೆ. ಚೆನ್ನಾಗಿ ಕುದಿಸಿದ ಅಥವಾ ಪಾಶ್ಚರೀಕರಿಸಿದ ಹಾಲಿನಲ್ಲಿ ರೋಗಾಣುಗಳು ನಾಶಹೊಂದುತ್ತವೆ. ಜಾನುವಾರುಗಳಲ್ಲಿ ಕ್ಷಯರೋಗಕ್ಕೆ ಸೂಕ್ತ ಚಿಕಿತ್ಸೆ ಲಭ್ಯವಿರುವುದಿಲ್ಲ.

## ಲಿಸ್ಟೀರಿಯಾ ಸೋಂಕು

ಜಾನುವಾರುಗಳಲ್ಲಿ ಕಂಡುಬರುವ ಲಿಸ್ಟೀರಿಯಾ ಸೋಂಕು ಕೆಚ್ಚಲುಬಾವು ಮತ್ತು ನರಸಂಬಂಧಿ ಕಾಯಿಲೆಗೆ ಕಾರಣವಾಗುತ್ತದೆ. ಅಂತಹ ರಾಸುಗಳ ಹಾಲನ್ನು ಸರಿಯಾಗಿ ಕಾಯಿಸದೆ ಕುಡಿದಾಗ ಗರ್ಭಿಣಿಯರಲ್ಲಿ ಗರ್ಭಪಾತ ಮತ್ತು ಮಗುವಿನ ನರಮಂಡಲಗಳಲ್ಲಿ ಸೋಂಕು ಆವರಿಸುವ ಸಾಧ್ಯತೆ ಇರುತ್ತದೆ. ಇತ್ತೀಚಿನ ವರ್ಷಗಳಲ್ಲಿ ಗರ್ಭಿಣಿಯರಲ್ಲಿ ಲಿಸ್ಟೀರಿಯಾ ಸೋಂಕು ಅಧಿಕವಾಗಿ ಕಾಣಿಸಿಕೊಳ್ಳುತ್ತಿದ್ದು, ಹಾಲನ್ನು ಚೆನ್ನಾಗಿ ಕಾಯಿಸಿ ಕುಡಿಯುವುದು ಅತೀ ಅಗತ್ಯವಾಗಿದೆ.

## ಮೊಟ್ಟೆ ಮತ್ತು ಮಾಂಸದಿಂದ ಕಾಯಿಲೆ

ಸಾಲ್ಮನೆಲ್ಲೋಸಿಸ್ (Salmanellosis)

ವಿಶ್ವ ಆರೋಗ್ಯ ಸಂಸ್ಥೆಯ ಪ್ರಕಾರ ಪ್ರಪಂಚದಲ್ಲಿ ಅತಿಸಾರ ಉಂಟು ಮಾಡುವ ನಾಲ್ಕು ಪ್ರಮುಖ ಕಾಯಿಲೆಗಳಲ್ಲಿ ಸಾಲ್ಮನೆಲ್ಲೋಸಿಸ್ ಒಂದು. ಸೋಂಕಿಗೆ ಒಳಗಾದ ಪ್ರಾಣಿ, ಕುಕ್ಕುಟದ ಮಾಂಸ ಮತ್ತು ಮೊಟ್ಟೆಗಳಲ್ಲಿ ಇದಕ್ಕೆ ಕಾರಣವಾಗುವ ರೋಗಾಣುಗಳು ಅಡಗಿರುತ್ತವೆ. ಇಂತಹ ಸೋಂಕಿತ ಪ್ರಾಣಿಯ ಮಾಂಸ ಅಥವಾ ಮೊಟ್ಟೆಗಳನ್ನು ಸರಿಯಾಗಿ ಬೇಯಿಸದೆ ರುಚಿಗಾಗಿ ಅರೆಬೆಂದ ಮಾಂಸಾಹಾರವನ್ನು ಸೇವಿಸುವುದು ಈ ಸೋಂಕಿಗೆ ಮುಖ್ಯ ಕಾರಣವಾಗಿದೆ. ಚೆನ್ನಾಗಿ ಬೇಯಿಸಿ ತಿನ್ನುವ ಪದ್ಧತಿಯನ್ನು ರೂಢಿಸಿಕೊಳ್ಳುವುದರಿಂದ ಸೋಂಕು ಹರಡದಂತೆ ತಡೆಗಟ್ಟಬಹುದು.

## ಲಾಡಿ ಹುಳುಗಳ ಬಾಧೆ

ಟೀನಿಯಾ ಎಂಬ ಲಾಡಿಹುಳು ಮನುಷ್ಯನ ಸಣ್ಣ ಕರುಳಿನಲ್ಲಿ ಪರಾವಲಂಬಿಯಾಗಿ ವಾಸಿಸುತ್ತದೆ. ಅವುಗಳ ಜೀವನ ಚಕ್ರದಲ್ಲಿ ಬರುವ ಕೋಶಾವಸ್ಥೆಯ ಹಂತದ ಮರಿಹುಳುಗಳು ಹಂದಿ ಮತ್ತು ಜಾನುವಾರುಗಳ ಮಾಂಸಖಂಡಗಳಲ್ಲಿ ಹುದುಗಿರುತ್ತವೆ. ಬಯಲು ಮಲ ವಿಸರ್ಜನೆಯಿಂದಾಗಿ, ಕಲುಷಿತ ಆಹಾರ ಮತ್ತು ನೀರಿನ ಮುಖಾಂತರ ಮತ್ತು ಮಾಂಸವನ್ನು ಸರಿಯಾಗಿ ಬೇಯಿಸದೆ ಸೇವಿಸಿದಾಗ ಈ ಕೋಶಾವಸ್ಥೆಯಲ್ಲಿದ್ದ ಮರಿ ಹುಳುಗಳು ಮನುಷ್ಯನ ಕರುಳು, ಕೆಲವೊಮ್ಮೆ ಮೆದುಳು ಮತ್ತು ಕಣ್ಣಿನಲ್ಲಿ ಸೇರಿ ಗಂಭೀರ ಸಮಸ್ಯೆಗೆ ಕಾರಣವಾಗುತ್ತದೆ.

## ಟಾಕ್ಸೋಪ್ಲಾಸ್ಮೋಸಿಸ್

ಬೆಕ್ಕುಗಳ ಕರುಳಿನಲ್ಲಿ ಪರಾವಲಂಬಿಯಾಗಿ ವಾಸಿಸುವ ಟಾಕ್ಸೋಪ್ಲಾಸ್ಮಾ ಜೀವಿಯ ಜೀವನ ಚಕ್ರದಲ್ಲಿ ಕೋಶಾವಸ್ಥೆಯ ಹಂತವು ಮನುಷ್ಯನಿಂದ ಹಿಡಿದು ಕುರಿ, ಮೇಕೆ, ಹಂದಿ, ಸೇರಿದಂತೆ ಎಲ್ಲಾ ಬಿಸಿ ರಕ್ತ ಪ್ರಾಣಿಗಳ ಮಾಂಸಖಂಡದಲ್ಲಿಯೂ ಸೇರುತ್ತದೆ. ಇಂತಹ ಸೋಂಕಿಗೊಳಗಾದ ಮಾಂಸವನ್ನು ಸರಿಯಾಗಿ ಸಂಸ್ಕರಿಸದೆ ಬಳಸಿದಾಗ ಮತ್ತು ಕಲುಷಿತ ಆಹಾರ ನೀರಿನಿಂದಾಗಿ ಪರಾವಲಂಬಿಯು ಗರ್ಭಿಣಿ ಮಹಿಳೆಯರಿಗೆ ಗಂಭೀರ ಸಮಸ್ಯೆಗಳನ್ನು ಉಂಟುಮಾಡುತ್ತದೆ. ಅಂತಹ ಸಂದರ್ಭಗಳಲ್ಲಿ ಗರ್ಭಪಾತ, ಅಪಸ್ಮಾರ, ಮಗುವಿನಲ್ಲಿ ಬುದ್ಧಿಮಾಂದ್ಯತೆಯಂತಹ ಗಂಭೀರ ನರ ಸಂಬಂಧಿ ಸಮಸ್ಯೆಗಳು ಉಂಟಾಗಬಹುದು. ಆದ್ದರಿಂದ ಗರ್ಭಿಣಿಯರು ಬೆಕ್ಕುಗಳಿಂದ ಆದಷ್ಟು ದೂರವಿರುವುದು ಮತ್ತು ಸರಿಯಾಗಿ ಬೇಯಿಸಿದ ಮಾಂಸಾಹಾರವನ್ನು ಸೇವಿಸುವುದು ಅತೀ ಮುಖ್ಯ.

ಲೇಖಕರು ತೀರ್ಥಹಳ್ಳಿಯಲ್ಲಿ ಪಶುವೈದ್ಯರು
ಸಂಪರ್ಕ: 9449585021